ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 98-104

IIMRD JOURNALS
www.iimrd.com

# ಭಾರತದ ಪ್ರಜಾಸತಾತ್ಮಕ ವ್ಯವಸ್ಥೆಯಲ್ಲಿ ಮತದಾನದ ಹಕ್ಕು ಮತ್ತು ಜಾಗೃತಿ: ಒಂದು ವಿಮರ್ಶೆ

**ಮೋಹಿನುದ್ದಿನ್ ಭಾಷಾ ಅಂತಡಿ**[1]

## ಪೀಠಿಕೆ

ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಮತದಾನ ಪದ್ಧತಿಯು ಒಂದು. ಮತದಾನದ ಹಕ್ಕನ್ನು ಪಡೆಯಲು ಅನೇಕ ರಾಷ್ಟ್ರಗಳಲ್ಲಿ ಕ್ರಾಂತಿಗಳು ಮತ್ತು ಹೋರಾಟಗಳು ನಡೆದಿವೆ. ಯುರೋಪಿಯನ್ ರಾಷ್ಟ್ರಗಳು ಈ ಪದ್ಧತಿಯನ್ನು ಜಾರಿಗೆ ತರಲು ಅನೇಕ ವರ್ಷಗಳನ್ನು ತೆಗೆದುಕೊಂಡಿದೆ. ಇದು ಅನೇಕ ಹಂತಗಳ ಮೂಲಕ ಕಾಲಕ್ರಮೇಣ ಅಸ್ತಿತ್ವಕ್ಕೆ ಬಂದ ಪದ್ಧತಿಯಾಗಿದೆ. ಆದರೆ ಭಾರತದಲ್ಲಿ ಬ್ರಿಟಿಷರು ಆಡಳಿತ ನಡೆಸುತ್ತಿರುವ ಕಾಲಾವಧಿಯಲ್ಲಿ ಭಾರತೀಯರೆಲ್ಲರಿಗೂ ಮತ ನೀಡುವ ಹಕ್ಕನ್ನು ನೀಡಿರಲಿಲ್ಲ. ಹಾಗಾಗಿ ಸ್ವಾತಂತ್ರ್ಯ ಭಾರತದ ಸಂವಿಧಾನ ನಿರ್ಮಾಪಕರು ಕೈಗೊಂಡ ಅತ್ಯಂತ ದಿಟ್ಟವಾದ ನಿರ್ಣಯವೆಂದರೆ ವಯಸ್ಕ ಮತದಾನ ಪದ್ಧತಿ.

## ಭಾರತದಲ್ಲಿ ಮತದಾನದ ಹಕ್ಕು

ಪ್ರಪಂಚದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ವಯಸ್ಕರು ಮತದಾನ ಮಾಡುವ ಪದ್ಧತಿ ರೂಢಿಯಲ್ಲಿದೆ. ವಯಸ್ಕರು ಎಂಬುದು ಎಲ್ಲ ರಾಷ್ಟ್ರಗಳಲ್ಲಿ ಒಂದೇಯಾಗಿರುವುದಿಲ್ಲ. ವಿಶ್ವದ ಆಯಾ ದೇಶದ ಸಂವಿಧಾನವು ಅಥವಾ ಕಾನೂನು ನಿರ್ದಿಷ್ಟ ವಯಸ್ಸಿನವರನ್ನು ಪ್ರೌಢರು ಅಥವಾ ಪ್ರಾಪ್ತ ವಯಸ್ಸಿನವರು/ವಯಸ್ಕರು ಎಂಬುದನ್ನು ನಿರ್ಧಾರ ಮಾಡುತ್ತದೆ. ಆದರೆ ಸಂವಿಧಾನ ಗೊತ್ತು ಪಡಿಸಿದ ವಯಸ್ಸನ್ನು ದಾಟಿದ ಎಲ್ಲಾ ಸ್ತ್ರೀ ಪುರುಷರಿಗೂ ಮತದಾನದ ಹಕ್ಕನ್ನು ಕೊಡುವುದರಿಂದ ಈ ಪದ್ಧತಿಯನ್ನು ಸಾರ್ವತ್ರಿಕ ಪ್ರೌಢ ಮತದಾನ ಪದ್ಧತಿ ಎಂದು ಕರೆಯಲಾಗಿದೆ. ಇಲ್ಲಿ ಮತದಾನದ ಹಕ್ಕನ್ನು ನಿಡುವಾಗ ಜಾತಿ, ಧರ್ಮ, ಲಿಂಗ, ವರ್ಗ, ಅಂತಸ್ತು, ಶಿಕ್ಷಣ ಮೊದಲಾದ ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಎಲ್ಲಾ ವಯಸ್ಕರಿಗೂ ಮತದಾನದ ಹಕ್ಕನ್ನು ನೀಡಲಾಗುವುದು. ಮತದಾನದ ಹಕ್ಕನ್ನು ಪಡೆಯಲು ನಾಗರಿಕರು ಕೆಲವೊಂದು

[1] *ರಾಜ್ಯಶಾಸ್ತ್ರ ಉಪನ್ಯಾಸಕರು, ಶಾರದ ಮಹಿಳಾ ಪದವಿ ಮಹಾವಿದ್ಯಾಲಯ, ಸಿಂಧನೂರು ತಾ. ರಾಯಚೂರು ಜಿಲ್ಲೆ*

ಅರ್ಹತೆಗಳನ್ನು ಪೂರೈಸಬೇಕಾಗುತ್ತದೆ. ಅವುಗಳಲ್ಲಿ ವಯಸ್ಸು ಪ್ರಮುಖ ಮಾನದಂಡವಾಗಿರುತ್ತದೆ. ಈ ವಯೋಮಿತಿಯನ್ನು ಆಧರಿಸಿ ನಿರ್ದಿಷ್ಟ ವಯಸ್ಸನ್ನು ದಾಟಿದ ಎಲ್ಲಾ ವಯಸ್ಕರಿಗೆ ಮತದಾನದ ಹಕ್ಕನ್ನು ನೀಡಲಾಗುವುದು ಉದಾಹರಣೆಗೆ ಭಾತರ, ಅಮೇರಿಕ, ಬ್ರಿಟನ್, ಚೀನ, ರಷ್ಯಾ, ಇರಾನ್, ಆಸ್ಟ್ರೇಲಿಯಾ, ಜರ್ಮನಿ, ಪಾಕಿಸ್ತಾನ ಮುಂತಾದ ರಾಷ್ಟ್ರಗಳಲ್ಲಿ 18 ವರ್ಷ ಪೂರ್ಣಗೊಂಡವರಿಗೆ ಮತದಾನದ ಹಕ್ಕನ್ನು ನೀಡಲಾಗಿದೆ. ಅದರಂತೆ ಸ್ವಿಝರ್ಲೆಂಡ್‌ನಲ್ಲಿ 20 ವರ್ಷ, ಜಪಾನ್‌ನಲ್ಲಿ 20 ವರ್ಷ, ಡೆನ್ಮಾರ್ಕ್‌ಗಳಲ್ಲಿ 25 ವರ್ಷ, ನಾರ್ವೆಯಲ್ಲಿ 23 ವರ್ಷ, ಸ್ಕಾಟ್ಲ್ಯಾಂಡನಲ್ಲಿ 16 ವರ್ಷ ಮಯೋಮಿತಿ ಗೊತ್ತು ಪಡಿಸಲಾಗಿದೆ. ಈ ರೀತಿಯಾಗಿ ಮತದಾನದ ಅರ್ಹತೆಯ ವಯಸ್ಸು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುತ್ತದೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಹುಟ್ಟಿನೊಂದಿಗೆ ಮತದಾನದ ಪದ್ಧತಿ ಹುಟ್ಟಿ ಬಂದಿದೆ ಎಂದು ಹೇಳಲಾಗುತ್ತದೆ.

ಮತದಾನವು ಭಾರತದ ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಚರಣೆಗೆ ಭಾರತೀಯ ಪ್ರಜೆಗಳಿಗೆ ಕೊಟ್ಟ ಉಚಿತ ಅಮೂಲ್ಯವಾದ ಕಾಣಿಕೆಯಾಗಿದೆ. ಹಾಗಾಗಿ ಭಾರತ ಸಂವಿಧಾನದ 326ನೇ ಕಲಂ ನಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಅಳವಡಿಸಿದ್ದಾರೆ. ಪ್ರಾರಂಭದಲ್ಲಿ 21 ವರ್ಷ ವಯಸ್ಸಾಗಿರುವ ಎಲ್ಲಾ ಭಾರತೀಯ ಸ್ತ್ರೀ ಪುರುಷರು ಮತ ಚಲಾಯಿಸಲು ಅರ್ಹರಾಗಿದ್ದರು. ಆದರೆ 1988 ರಲ್ಲಿ ಅಂದಿನ ಭಾರತದ ಪ್ರಧಾನಿಯಾದ ಶ್ರೀಯುತ ರಾಜೀವ್ ಗಾಂಧೀಯವರ ವಿಶೇಷ ಕಾಳಜಿಯಿಂದ ಭಾರತೀಯ ಸಂವಿಧಾನಕ್ಕೆ 61ನೇ ತಿದ್ದುಪಡಿಯನ್ನು ತರುವುದರ ಮೂಲಕ ಭಾರತೀಯ ಮತದಾರನ ವಯೋಮಿತಿಯನ್ನು 21 ವರ್ಷದಿಂದ 18 ವರ್ಷಕ್ಕೆ ಇಳಿಸಲಾಯಿತು. ಮತದಾನದ ಹಕ್ಕು ಜಾತಿ, ಧರ್ಮ, ಲಿಂಗ, ಬಡತನ, ಸಿರಿತನ ಯಾವುದೇ ತಾರತಮ್ಯ ಮಾಡದೇ ಎಲ್ಲರಿಗೂ ಸಮಾನ ಅವಕಾಶವನ್ನು ನೀಡಿದೆ. ಇದು ಪ್ರಜೆಗಳ ಕೈಯಲ್ಲಿರುವ ಪರಮಾಧಿಕಾರದ ಸಂಕೇತವಾಗಿದ್ದು, ಪ್ರಜಾಪ್ರಭುತ್ವದ ಸರ್ಕಾರದ ಸ್ಥಾಪನೆಗೆ ಅತ್ಯವಶ್ಯಕವಾಗಿದೆ.

ಮತದಾನ ಹಕ್ಕನ್ನು ಹೊಂದಿರುವವರೆಲ್ಲರೂ ತಮ್ಮ ಮತವನ್ನು ಪ್ರಾಯೋಗಿಕವಾಗಿ, ನಿರ್ಭಯವಾಗಿ, ನಿಷ್ಪಕ್ಷಪಾತವಾಗಿ ಚಲಾಯಿಸುವುದು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿ ಎಂದು ತಿಳಿಯಬೇಕು. ಭಾರತದಲ್ಲಿ ಮತದಾನದ ಹಕ್ಕನ್ನು ಸಾರ್ವತ್ರಿಕವಾಗಿ ನೀಡಲಾಗಿರುವುದರಿಂದ ಮತದಾರರ ಸಂಖ್ಯೆ ಜಗತ್ತಿನ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಿಗಿಂತ ಹೆಚ್ಚಾಗಿದ್ದು, ಈ ಕಾರಣಕ್ಕಾಗಿ ಭಾರತದ ಪ್ರಜಾಪ್ರಭುತ್ವ ರಾಷ್ಟ್ರವೆಂದು ಕರೆಯಲಾಗಿದೆ. ಏಕೆಂದರೆ ಪ್ರಜಾಪ್ರಭುತ್ವದ ಪ್ರಕ್ರಿಯೆಗಳಲ್ಲಿ ಚುನಾವಣೆಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಆದ್ದರಿಂದಲೇ ಚುನಾವಣೆಗಳನ್ನು ಪ್ರಜಾಪ್ರಭುತ್ವದ ನಿಜವಾದ ಅನುಷ್ಠಾನದ ಆರಂಭ ಚುನಾವಣೆಯ ಮೂಲಕವೇ ನಿರ್ಧಾರವಾಗುತ್ತದೆ. ಈ ಮೂಲಕ ಜನಪ್ರತಿನಿಧಿಗಳಾಗಿ ಆಯ್ಕೆಯಾಗುವವರು ಪ್ರಜಾಪ್ರಭುತ್ವದ ಆಶಯವನ್ನು ಈಡೇರಿಸುದರ ಕಡೆಗೆ ಶ್ರಮಿಸಬೇಕಾಗುತ್ತದೆ. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್‌ರವರು

ಪ್ರಜಾಪ್ರಭುತ್ವದ ಕಲ್ಪನೆಯು ದೇಶದ ಕಟ್ಟಕಡೆಯ ಮನುಷ್ಯ ಕೂಡ ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆಯಿಂದ ಬದುಕುವುದಾಗಿದ್ದು, ಪ್ರತಿಯೊಬ್ಬ ಪ್ರಜೆಯು ಸಮಾನ ಅವಕಾಶಗಳನ್ನು ಪಡೆಯುವ ಮೂಲಕ ಮಾತ್ರ ಭಾರತದ ಪ್ರಗತಿ ಸಾಧ್ಯವೆಂದು ಅವರು ತಿಳಿದಿದ್ದರು.

**ಮಹಿಳೆಯರಿಗೆ ಮತದಾನದ ಹಕ್ಕು**

ಮತದಾನ ಪ್ರತ್ಯಕ್ಷ ಹಾಗೂ ಪರೋಕ್ಷ, ಗುಪ್ತ ಹಾಗೂ ಬಹಿರಂಗ, ನಿರ್ಬಂಧಿತ ಹಾಗೂ ಪ್ರೌಢ ಮತದಾನ ಪದ್ಧತಿಗಳೆಂದು ಬೆಳೆದು ಬಂದಿದೆ. ವಯಸ್ಕ ಮತದಾನ ಪದ್ಧತಿಯಲ್ಲಿ ಸ್ತ್ರೀ ಪುರುಷರಿಗೆ ಸಮಾನ ಮತದಾನದ ಹಕ್ಕನ್ನು ನೀಡಬೇಕು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರೌಢ ಮತದಾನ ಪದ್ಧತಿಯು ಜಾರಿಗೆ ಬರಲು ಶತಮಾನಗಳೆ ಉರುಳಿವೆ. ಇಂಗ್ಲೆಂಡ್ನಲ್ಲಿ 1832ರಲ್ಲಿ ಮಹಿಳೆಯರು ತಮಗೆ ಮತದಾನದ ಹಕ್ಕನ್ನು ನೀಡುವಂತೆ ಅಲ್ಲಿನ ಸರ್ಕಾರವನ್ನು ಒತ್ತಾಯಿಸಿದರು ಆದರೆ 1932ರ ವೇಳೆಗೆ ಮಹಿಳೆಯರಿಗೆ ಪುರುಷರೊಂದಿಗೆ ಸಮಾನವಾಗಿ ಮತದಾನದ ಹಕ್ಕನ್ನು ನೀಡಿತು. ಆಮೇರಿಕದಲ್ಲಿ ಪುರುಷ ವಯಸ್ಕ ಮತದಾನದ ಪದ್ಧತಿಯನ್ನು 1840ರಲ್ಲಿ ಜಾರಿಗೊಳಿಸಲಾಯಿತು. ಆದರೆ ಆಮೇರಿಕದಲ್ಲಿ 1919 ರಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ವಿಸ್ತರಿಸಲಾಯಿತು. ಫ್ರಾನ್ಸ ದೇಶವು 1875 ರಲ್ಲಿ ಪುರುಷರಿಗೆ ಮತದಾನದ ಹಕ್ಕನ್ನು ನೀಡಿತು. ನಂತರ 1945ರಲ್ಲಿ ಮಹಿಳೆಯರಿಗೂ ಸಹ ನೀಡಲಾಯಿತು. ಇಟಲಿ ದೇಶದಲ್ಲಿ 1948ರಲ್ಲಿ ಸ್ತ್ರೀ ಪುರುಷರಿಗೆ ಮತದಾನದ ಹಕ್ಕನ್ನು ನೀಡಿತು. ಸ್ವಿಝರ್ಲೆಂಡ್ 1973 ರಲ್ಲಿ ಪ್ರೌಢ ಮತದಾನ ಪದ್ಧತಿ ನೀಡಿತು. ಆದರೆ ಭಾತರದಲ್ಲಿ ಪ್ರೌಢ ಮತದಾನ ಪದ್ಧತಿ 1950 ರಲ್ಲಿ ಜಾರಿಗೆ ಬಂದಿತು.

2014ಕ್ಕೆ ಭಾರತದ ಜನಸಂಖ್ಯೆ 127,02,72,105. ಇದರಲ್ಲಿ ಪುರಷರ ಪ್ರಮಾಣ 65,58,75,025 ಮತ್ತು ಮಹಿಳೆಯರ ಪ್ರಮಾಣ 61,43,97,079. ಲಿಂಗಾನುಪಾತದ (ಪ್ರತಿ ಸಾವಿರ ಪುರುಷರಿಗೆ ಮಹಿಳೆಯರ ಸಂಖ್ಯೆ) ಪ್ರಮಾಣ 940. 2014ರ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಮತ ಚಲಾಯಿಸಿದವರ ಪ್ರಮಾಣ 12 ಕೋಟಿ. ಭಾರತದ ಚುನಾವಣಾ ಆಯೋಗದ ಅಂಕಿ ಅಂಶಗಳನ್ನು ಆಧರಿಸಿ ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋ ನೀಡಿರುವ ಮಾಹಿತಿ ಪ್ರಕಾರ ದೇಶದ ಒಟ್ಟು ಮತದಾರರ ಸಂಖ್ಯೆ 81,45,91,184. ಇವರಲ್ಲಿ ಪುರುಷ ಮತದಾರರ ಸಂಖ್ಯೆ 52.4% ಆದರೆ ಮಹಿಳಾ ಮತದಾರರ ಸಂಖ್ಯೆ 47.6% ಈ ಮೇಲಿನ ಅಂಕಿ ಅಂಶಗಳನ್ನು ನೋಡಿದರೆ ಲಿಂಗಾನುಪಾತದಲ್ಲೂ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಆದರೆ ಗ್ರಾಮೀಣ ಮಹಿಳೆ ಮತದಾನದ ಪ್ರಮಾಣವನ್ನು ಗಮನಿಸಿದರೆ ಹಲವು ಸಕರಾತ್ಮಕ ಅಂಶಗಳು ಗೋಚರಿಸುತ್ತದೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದ ಬಹುತೇಕ ಮಹಿಳೆಯರು ಅನಕ್ಷರಸ್ಥರು. ಕೃಷಿಕೂಲಿ, ಮನೆಕೆಲಸ, ಪ್ರಾಣಿಸಾಕಾಣಿಕೆ/ಪಶುಸಂಗೋಪನೆ ಆಕೆಯ ಮುಖ್ಯ ಕಸುಬಾಗಿದ್ದು, ರಾಜಕೀಯ ಪ್ರಜ್ಞೆ

ತೀರಾ ಕಡಿಮೆಯಿರುತ್ತದೆ. ಮನೆಯ ಗಂಡಸರು ಹೇಳಿದರಷ್ಟೆ ಆಕೆ ಓಟು ಹಾಕುತ್ತಾಳೆ. ದಿ ಹಿಂದೂ ದೈನಿಕದಲ್ಲಿ ನೀಡಿರುವ ಅಂಕಿ ಅಂಶದ ಪ್ರಕಾರ ಮಹಿಳೆಯರ ಸಂಖ್ಯೆ 96 ಲಕ್ಷ ಹೀಗಾಗಿ 21ನೇ ಶತಮಾನದಲ್ಲಿರುವ ಭಾರತದ ಗ್ರಾಮೀಣ ಮಹಿಳೆ ಒಂದು ರೀತಿಯ ಆತಂತ್ರ ಸ್ಥಿತಿಯಲ್ಲಿದ್ದಾಳೆ ಮಾರ್ಚ್ 4, 2014 ರ ಇಂಡಿಯ ಟುಡೆ ಪ್ರತಿಕೆಯಲ್ಲಿನ ಅಭಿಪ್ರಾಯವೊಂದು ಭಾರತಕ್ಕೆ ಮಹಿಳಾ ಮತ ಬ್ಯಾಂಕಿನ ಅವಶ್ಯಕತೆ ಇದೆ ಎಂದೂ ಹೇಳುತ್ತದೆ. ಅದೇ ಮಾರ್ಚ್ 9, 2014ರ 'ದಿ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಮಹಿಳಾ ಮತದಾರರನ್ನು ಸೆಳೆಯುವುದು ಕಠಿಣ ಎಂಬ ಅನಿಸಿಕೆ ವ್ಯಕ್ತವಾಗಿದೆ. ಬಹುತೇಕ ರಾಜಕೀರಣಗಳು ಮಹಿಳಾ ಮತದಾರರನ್ನು ಕಡೆಗಣಿಸಿದ್ದರೆ ಎಂದೆ ವರದಿಗಳು ಹೇಳುತ್ತವೆ. ಈ ವರದಿಗಳನ್ನೆಲ್ಲ ಗಮನಿಸಿದಾಗ ಬಹುತೇಕ ಮಹಿಳಾ ಮತದಾರರು ಮತದಾನದಲ್ಲಿ ಪಾಲ್ಗೋಳ್ಳುತ್ತಿಲ್ಲ ಎಂಬುದು ತಿಳಿಯುತ್ತದೆ. ಆದರೆ ನಗರವಾಸಿ ಮಹಿಳಾ ಮತದಾರರಿಗಿರುವ ಕಾರಣಗಳೆ ಬೇರೆ ಗ್ರಾಮೀಣ ಮಹಿಳೆಯರಿಗಿರುವ ಕಾರಣಗಳೇ ಬೇರೆ ಇವರಿಗೆ ಕೌಟುಂಬಿಕ ಮತ್ತು ಸಾಮಾಜಿಕ ಕಾರಣಗಳು ಇರಬಹುದು ಕೆಲವೊಮ್ಮೆ ಕೆಲವೆಡೆ ಮತದಾನ ಕ್ಷೇತ್ರಗಳು ದೂರ ಇರುವುದು ಇದಕ್ಕೆ ಕಾರಣ ಇರಬಹುದು.

**ರಾಷ್ಟ್ರೀಯ ಮತದಾರರ ದಿನಾಚರಣೆ**

1950 ಜನವರಿ 25 ಭಾರತದ ಚುನಾವಣಾ ಆಯೋಗದ ಸಂಸ್ಥಾಪನ ದಿನ. ಪ್ರತಿ ವರ್ಷ ಈ ದಿನವನ್ನು ರಾಷ್ಟ್ರೀಯ ಮತದಾರರ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತದೆ. 2011ರಲ್ಲಿ ಮತದಾರರ ದಿನಾಚರಣೆಗೆ ಅಧಿಕೃತ ಚಾಲನೆ ನೀಡಲಾಯಿತು. ಚುನಾವಣಾ ಆಯೋಗವು ಒಂದು ಸಂವಿಧಾನಾತ್ಮಕ ಸ್ವತಂತ್ರ್ಯವಾದ ಸಂಸ್ಥೆಯಾಗಿದ್ದು, ಸಂವಿಧಾನದ 15ನೇ ಭಾಗದಲ್ಲಿ 324 ರಿಂದ 329 ನೇ ವಿಧಿಯವರೆಗೂ ಚುನಾವಣೆ ಮತ್ತು ಮತದಾನದ ಬಗ್ಗೆ ವಿವರಣೆ ಇದೆ. ಪ್ರಜೆಗಳು ತಮ್ಮ ಶಕ್ತಿಶಾಲಿ ಅಸ್ತ್ರವನ್ನು ಇನ್ನೂ ಹೆಚ್ಚಾಗಿ ಬಳಕೆ ಮಾಡಬೇಕು ಎನ್ನುವ ದೃಷ್ಟಿಯಿಂದ, ಮತದಾರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿಯೇ ಮತದಾರರ ದಿನಾಚರಣೆ ಆಚರಿಸಲಾಗುತ್ತದೆ. ಅದರಲ್ಲೂ ದೇಶದ ರಾಜಕೀಯ ಪ್ರಕ್ರಿಯೆಯಲ್ಲಿ ಯುವ ಮತದಾರರನ್ನು ಸೆಳೆಯುವ ಪರಿಣಾಮಕಾರಿಯಾಗಿ ಮತದಾನದಲ್ಲಿ ಭಾಗವಹಿಸಬೇಕು ಎಂಬ ಉದ್ದೇಶದಿಂದ ಮತದಾರರ ದಿನಾಚರಣೆ ಆಚರಿಸಲು ಕೇಂದ್ರ ಚುನಾವಣಾ ಆಯೋಗ ನಿರ್ಧರಿಸಿತ್ತು. ಏಕೆಂದರೆ ದೇಶದ ಭವಿಷ್ಯ ಯುವ ಶಕ್ತಿಯಲ್ಲಿ ಅಡಗಿದೆ. ದೇಶ ಕಟ್ಟುವ, ಮುಂದಿನ ಪೀಳಿಗೆಗೆ ಕನಸುಗಳನ್ನು ಸಾಕಾರಗೊಳಿಸುವ, ದೂರದೃಷ್ಟಿಯುಳ್ಳ ಕಲ್ಪನೆಯನ್ನು ಸಿದ್ದಗೊಳಿಸಿ ಉತ್ತಮ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವವನ್ನು ಸದೃಢಗೊಳಿಸಲು ಮುಂದಾಗಬೇಕು.

ಭಾರತ ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರ. ಕಳೆದ 2014 ರಲ್ಲಿ 16ನೇ ಲೋಕಸಭಾ ಚುನಾವಣೆಯಲ್ಲಿ 81.5 ಕೋಟಿ ಇದ್ದ ಮತದಾರರ ಸಂಖ್ಯೆ 2019

ರಲ್ಲಿ ಲೋಕಸಭಾ ಚುನಾವಣೆಗೆ ರಾಷ್ಟ್ರದಲ್ಲಿನ ಒಟ್ಟಾರೆ ಮತದಾರರ ಸಂಖ್ಯೆ 90 ಕೋಟಿಗೆ ಏರಿದೆ, ಇವರೆಲ್ಲರಿಗೂ ಮತದಾನ ಅರಿವು ಮೂಡಿಸಿ ಜಾಗೃತಗೊಳಿಸುವುದರ ಮೂಲಕ ಮತದಾನದಿಂದ ಯಾರು ಹೊರಗುಳಿಯಬಾರದಂತೆ ತಮ್ಮ ಹಕ್ಕನ್ನು ತಪ್ಪದೇ ಚಲಾಯಿಸಬೇಕು. ಮತದಾನ ಎನ್ನುವುದು ನಮ್ಮ ಪ್ರಾಥಮಿಕ ಅಧಿಕಾರ ನಮ್ಮನ್ನು ಆಳುವವರನ್ನು ಪ್ರಶ್ನಿಸುವ ಆಧಿಕಾರ ನಮಗೆ ಸಿಗುವುದು ಮತದಾನದಿಂದ. ಹಾಗಾಗಿ ನಾವೆಲ್ಲಾ ಮತ ಚಲಾಯಿಸಿ ಪ್ರಜಾಪ್ರತಿನಿಧಿಗಳಿಗೆ ಕೊಡುವ ಆಧಿಕಾರವೇ ಸೇವೆಯಾಗುತ್ತದೆ. ಇದನ್ನು ಮನಗಂಡು ಉತ್ತಮ ಸಚ್ಚಾರಿತ್ರ್ಯವಂತರನ್ನು ಹಾಗೂ ಉತ್ತಮ ಆಡಳಿತ ಕೊಡುವ ದಕ್ಷ ವ್ಯಕ್ತಿಯನ್ನು ಆರಿಸಬೇಕಾದುದು ಪ್ರಜೆಗಳ ಬಲವಾದ ಜವಾಬ್ದಾರಿಯಾಗಿದೆ. ಅದಕ್ಕಾಗಿಯೇ ಮತದಾನದ ಮಹತ್ವ, ಮತದಾರರು ಚಲಾಯಿಸುವ ಮತದ ಮೌಲ್ಯ ಪ್ರತಿನಿಧಿಗಳ ಆಯ್ಕೆ ಆ ಮೂಲಕ ಸೂಕ್ತ ಸರ್ಕಾರ ಅಸ್ತಿತ್ವಕ್ಕೆ ತರಲು ಮತದಾರರನ್ನು ಅರಿವು ಮೂಡಿಸುವುದು ತುಂಬ ಅಗತ್ಯವಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳು ಕಳೆದರೂ ಮತದಾನ ಮಹತ್ವದ ಬಗ್ಗೆ ಅರಿವು ಮೂಡಿಸಬೇಕಾಗಿ ಬಂದಿರುವುದು ನೋವಿನ ಸಂಗತಿ. ಏಕೆಂದರೆ ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳು ತಮ್ಮ ಮತದ ಹಕ್ಕಿನ ಬಗ್ಗೆ ಅರಿವು ಇಲ್ಲದೇ ವರ್ತಿಸುವುದು ಕಂಡುಬಂದಿದೆ. ದೇಶದಲ್ಲಿ ಶೇ 100 ರಷ್ಟು ಮತದಾನ ಆಗಿರುವುದು ಉದಾಹರಣೆ ಇಲ್ಲ. ಇದಕ್ಕೆ ಅರಿವಿನ ಕೊರತೆ ಜೊತೆಗೆ ಮತದಾನದಿಂದ ಹೊರಗುಳಿಯುವುದು. ಅದು ಪ್ರತಿ ಚುನಾವಣೆ ನಡೆದಾಗಲೂ ಒಂದಿಷ್ಟು ಜನ ಅದರಲ್ಲೂ ವಿಶೇಷವಾಗಿ ಕಲಿತವರು ಪ್ರಭುದ್ದರೆನಿಸಿಕೊಂಡವರು ಮತದಾನದಿಂದ ದೂರ ಉಳಿಯುತ್ತಿರುವುದು ಕೆಟ್ಟ ವಾಡಿಕೆಯಾಗಿ ಬೆಳೆದು ಬಂದಿದೆ. ಕಲಿತವರೆ, ಹೀಗೆ ಮಾಡಿದರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅರ್ಥ ಮತ್ತು ಗೌರವ ಬರುವುದಾದರೂ ಹೇಗೆ? ಕಲಿತವರು ಮತ ಚಲಾಯಿಸದೆ ಪೋಲು ಮಾಡುತ್ತರೆ. ಕಲಿಯದವರು ಯಾರದೋ ಪ್ರಭಾವಕ್ಕೆ ಒಳಗಾಗಿ, ಆಮಿಷಗಳಿಗೆ ಬಲಿಯಾಗಿ ತಮ್ಮ ಮತದ ಮೌಲ್ಯ ಕಳೆಯುತ್ತಾರೆ. ಇಬ್ಬರ ಮತ ಪೋಲು ಸ್ವರೂಪ, ಶೈಲಿ ಬೇರೆ–ಬೇರೆಯಾದರೂ ತಲುಪುವ ಗುರಿಮಾತ್ರ ಒಂದೇ. ಇದು ಪ್ರಜಾತಂತ್ರ ವ್ಯವಸ್ಥೆಗೆ ಪ್ರಜೆಗಳೇ ಎಸಗುವ ಘೋರ ಅಪಚಾರ ಎನ್ನಬಹುದು. ಚುನಾವಣೆಯಲ್ಲಿ ಒಬ್ಬ ವ್ಯಕ್ತಿಯ ಗೆಲುವಿಗೆ ಒಂದೊಂದು ಮತ ಮಹತ್ವ ಪಡೆದಿದೆ. ಕೆಲವು ಸಲ ನಮ್ಮ ಒಂದು ಮತದಿಂದ ಏನಾಗಿಬಿಡುತ್ತದೆ,ಎಂದು ಕೊಳ್ಳುತ್ತಿರುತ್ತೇವೆ. ನಮ್ಮ ಹಾಗೆ ಇನ್ನು 10 ಜನ ಯೋಚಿಸಿದಾಗ, ಸಾವಿರ ಜನ ಯೋಚಿಸಿದಾಗ ಅದರ ಪರಿಣಾಮವೂ ದೊಡ್ಡದಾಗುತ್ತದೆ. ಸಮಾಜಕ್ಕೆ ಒಳ್ಳೆಯದಾಗುವುದನ್ನು ನಾವೇ ತಡೆದ ಹಾಗಾಗುತ್ತದೆ. ಹಾಗಾಗಿ ಎಲ್ಲರೂ ತಮ್ಮ ಜವಾಬ್ದಾರಿ ಅರಿತು ಯೋಚಿಸಿ ಹಕ್ಕು ಚಲಾಯಿಸಬೇಕು.

**ಸಲಹೆಗಳು**

ಮತದಾನ ಅಥವಾ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರ ಭಾಗವಹಿಸಿ ತಮ್ಮ ದೇಶದ ಅಥವಾ ರಾಜ್ಯದ ರಾಜಕೀಯ ವ್ಯವಸ್ಥೆಯ ಹಣೆಬರಹ ಬರೆಯುತ್ತಾನೆ. ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ ದೇಶ ಅಥವಾ ರಾಜ್ಯದ ಆಡಳಿತ ವಿಧಾನ ಸುಭದ್ರವಾಗಿರುತ್ತದೆ. ಆದರೆ ಹಿಂದಿನ ಚುನಾವಣೆಗಳನ್ನು ಗಮನಿಸಿದಾಗ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರವೇಶದಲ್ಲಿ ಮತದಾನ ಅಧಿಕವಾಗುತ್ತದೆ. ಸಾಮಾನ್ಯವಾಗಿ ನಗರ ಪ್ರದೇಶದಲ್ಲಿ ಹೆಚ್ಚಿನ ವಿದ್ಯಾವಂತರಿರುವುದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬ ನಂಬಿಕೆಯಿದೆ. ಆದರೆ ಮತದಾನದ ಪ್ರಕ್ರಿಯೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಮತವಾದರೆ ನಗರಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ಮತದಾನವಾಗುತ್ತದೆ. ಹಾಗಾಗಿ ಭಾರತ ಸರ್ಕಾರವು ಮತದಾನದ ಪ್ರಮಾಣವನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದ್ದು, ಅಧ್ಯಯನದ ಆಧಾರದ ಮೇಲೆ ಕೆಲವು ಸಲಹೆಗಳನ್ನು ನೀಡಬಹುದಾಗಿದೆ. ಭಾರತದ ಚುನಾವಣಾ ಆಯೋಗವು ದೇಶದಲ್ಲಿ ಮೊದಲನೇಯ ಸಾರ್ವತ್ರಿಕ ಚುನಾವಣೆಯಿಂದ ಇದುವರೆಗೂ ಜರುಗಿರುವ ಎಲ್ಲಾ ಚುನಾವಣೆಗಳನ್ನು ದೇಶ ಮತ್ತು ರಾಜ್ಯವಾರು ಸಾರ್ವತ್ರಿಕ ಚುನಾವಣೆಗಳನ್ನು ಪರಾಮರ್ಶೆ ಮಾಡಿ, ಮತದಾನದ ಪ್ರಮಾಣ ಹೆಚ್ಚಿಸುವಂತೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಅರ್ಹ ಪ್ರಜೆಗಳು ತಪ್ಪದೇ ಕಡ್ಡಾಯವಾಗಿ ಮತದಾನ ಮಾಡಲೇ ಬೇಕು ಎಂದು ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು. ಇದರೊಂದಿಗೆ ಒಂದು ವೇಳೆ ಯಾರಾದರೂ ಮತದಾನ ಮಾಡದಿದ್ದರೆ ಅವರಿಗೆ ಸರ್ಕಾರಿ ಸೌಲಭ್ಯಗಳನ್ನು ಕೊಡುವುದನ್ನು ನಿಲ್ಲಿಸಬೇಕು ಎಂದು ಚುನಾವಣಾ ಆಯೋಗವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಮತ್ತು ಪ್ರತಿ ಚುನಾವಣೆಯಲ್ಲಿ ಒಂದು ನಿರ್ದಿಷ್ಟ ಗುರಿಯಾಧಾರಿತ ಮತದಾನ ಆಗುವಂತೆ ಕ್ರಮಗಳನ್ನು ಕೈಗೊಳ್ಳಬೇಕಿರುವುದು ಅಗತ್ಯವಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಪ್ರಜಾಸತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆ ಮತದಾನದ ಪ್ರಕ್ರಿಯೆಯಲ್ಲಿ ಬಾಗವಹಿಸಿ ಮತ ಚಲಾಯಿಸುವುದು ಪ್ರಮುಖವಾದ ಕರ್ತವ್ಯವಾಗಿದೆ. ಆದರೆ ಮತದಾರರಿಗೆ ಮತದಾನದ ಬಗ್ಗೆ ಎಷ್ಟೋ ಬಾರಿ ಕೇಂದ್ರ ಚುನಾವಣಾ ಆಯೋಗವು ಜಾಗೃತಿ ಮೂಡಿಸಿದರೂ ಸಹ ಪ್ರಜೆಗಳು ಮತದಾನದಿಂದ ದೂರು ಉಳಿಯುವುದು ಕಂಡು ಬಂದಿದೆ. ಇದಕ್ಕೆ ಜ್ಞಾನದ ಕೊರತೆ ಎದ್ದು ಕಾಣುತ್ತದೆ. ಹಾಗೂ ಭಾರತ ದೇಶದಲ್ಲಿ ಯಾವುದೇ ಚುನಾವಣೆಗಳು ಜರುಗಿದರು ಸಹ ಶೇಕಡಾ 100% ರಷ್ಟು ಮತದಾನ ಆಗಿರುವ ನಿದರ್ಶನಗಳು ಇಲ್ಲ. ಅದಕ್ಕಾಗಿ ಎಲ್ಲಾ ಪ್ರಜೆಗಳಿಗೆ ಮತದಾನದಿಂದ ಆಗುವ ಲಾಭಗಳ ಬಗ್ಗೆ ಅರಿವು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

**ಪರಾಮರ್ಶನ ಗ್ರಂಥಗಳು**


- ಹರ್ಷಿತಾ ಶಿವಣ್ಣ. (ಏಪ್ರಿಲ್, 2019). ಜನಸ್ನೇಹಿ ಮತಗಟ್ಟೆಗಳ ಸ್ಥಾಪನೆ, ಜನಪದ ಮಾಸಿಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪು.ಸಂ.38
- ಮಂಜುನಾಥ. (ಏಪ್ರಿಲ್, 2019). ಮತದಾನ ಮತ್ತು ಮತದಾರನ ಪ್ರಾಮುಖ್ಯತೆ. ಜನಪದ ಮಾಸಿಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪು.ಸಂ.24
- ನವಿಕ. (ಮೇ, 2018). ಮತದಾನ: ಮತದಾರರ ಅಮೂಲ್ಯ ಹಕ್ಕು, ಜನಪದ ಮಾಸಿಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪು.ಸಂ.20
- ನಾರಾಯಣ ಸ್ವಾಮಿ ಕೆ. (2014). ಗ್ರಾಮೀಣ ಮಹಿಳೆ ಮತ್ತು ಚುನಾವಣೆ, ಜನಪದ ಮಾಸಿಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪು.ಸಂ.10
- ಪಾಟೀಲ್ ಜೆ.ಎಸ್. (2018). ಭಾರತ ಸರ್ಕಾರ ಮತ್ತು ರಾಜಕೀಯ. ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ.
- ಪಾಟೀಲ್ ಎನ್.ಬಿ. ಮತ್ತು ಜಿ.ಬಿ. ಶೀಲವಂತ. (2013). ಭಾರತದ ರಾಜಕೀಯ ಪ್ರಕ್ರಿಯೆಗಳು ಹಾಗೂ ಸಂಸ್ಥೆಗಳು. 5ನೇ ಆವೃತ್ತಿ, ಅರುಣ ಪ್ರಕಾಶನ, ಬಿಜಾಪುರ.
- ವಿದ್ಯಾಸಾಗರ ಐ.ಎಸ್. (2018). ಭಾರತ ಸರ್ಕಾರ ಮತ್ತು ರಾಜಕೀಯ. ಎಸ್.ಎಸ್. ಭಾವಿಕಟ್ಟಿ ಪ್ರಕಾಶನ, ಗುಲ್ಬರ್ಗ.
- Patil. J.S (2013). Political process in India. Siddhalingeshwara Prakashana, Gulburga.
- Patil. J.S (2018). Indian government and politics. Siddhalingeshwara Prakashana, Gulburga.